

ಓದಬೇಕೆಂಬ ಆಸೆಯಿದ್ದರೂ ವಂಶಪಾರಂಪರ್ಯವಾಗಿ ಬಂದ ಮನೆತನದ ಬಡತನ ಚಿದಂಬರ ಓದಿಗೆ ತಿಲಾಂಜಲಿಕೊಟ್ಟು ಕೆಲಸಕ್ಕೆ ಸೇರುವಂತೆ ಮಾಡಿತ್ತು. ಆರಂಭದಲ್ಲಿ ಗುತ್ತಿಗೆ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ ನೌಕರಿಗಿಟ್ಟಿಸಿದ. ಬರೋಬ್ಬರಿ ಹದಿನೈದು ವರ್ಷಗಳ ಕಾಲ ತಾತ್ಕಾಲಿಕ ನೇಮಕಾತಿಯಲ್ಲೆ ಬದುಕು ಸವೆಸಿ ಕೊನೆಗೊಮ್ಮೆ ಖಾಯಂ ನೌಕರನೆಂದು ನಿಯುಕ್ತಿಗೊಳ್ಳುವ ವೇಳೆಗೆ ಆತ ಬದುಕಿನಲ್ಲಿ ಭರವಸೆಯನ್ನೆ ಕಳೆದುಕೊಂಡವನಂತಾಗಿದ್ದ. ತಾತ್ಕಾಲಿಕ ನೌಕರಿಯನ್ನೇ ಖಾಯಂ ನೌಕರಿಯೆಂದು ಸುಳ್ಳು ಹೇಳಿದ ಮದುವೆ ದಲ್ಲಾಳಿಯ ದಗಲುಬಾಜಿತನದಿಂದ ಪದ್ಮಾವತಿಯಂಥ ಅನುರೂಪದ ಹೆಣ್ಣನ್ನು ಹೆಂಡತಿಯಾಗಿ ಕೈಹಿಡಿಯುವ ಭಾಗ್ಯ ಚಿದಂಬರನಿಗೆ ದಕ್ಕಿತಾದರೂ ತನ್ನದು ತಾತ್ಕಾಲಿಕ ನೌಕರಿ ಎನ್ನುವ ಸಂಗತಿ ಬಹಳ ಕಾಲ ರಹಸ್ಯವಾಗುಳಿಯದೆ ಅದು ಸಮಯ ಸಂದರ್ಭ ಎದುರಾದಾಗಲೆಲ್ಲ ಹೆಂಡತಿ ಆಡಿಕೊಂಡು ನಗುವ ವಿಷಯವಾದದ್ದು ಇವತ್ತಿಗೂ ಚಿದಂಬರನಿಗೆ ಅರಗಿಸಿಕೊಳ್ಳಲಾಗದ ಕಟುಸತ್ಯವಾಗಿ ಕಾಡಿ ಕಂಗೆಡಿಸುತ್ತದೆ.

ಚಿದಂಬರ ವಿಶ್ವವಿದ್ಯಾಲಯದ ಆಡಳಿತ